"Makeup CIE/IA Verification"

ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ:ಬಿಟಿಇ/05/ಇಸಿಎಸ್(1)/2024

ಆಯುಕ್ತರವರ ಕಛೇರಿ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಅರಮನೆ ರಸ್ತೆ, ಬೆಂಗಳೂರು-560001
ದಿನಾಂಕ:29.06.2024

**ಜ್ಞಾಪನ**

ವಿಷಯ: ಜೂನ್/ಜುಲೈ 2024 Makeup ಪರೀಕ್ಷೆಗೆ ಸಂಬಂಧಿಸಿದಂತೆ ಆಂತರಿಕ ಅಂಕಗಳನ್ನು ಪರಿಶೀಲಿಸಲು ಪರಿವೀಕ್ಷಕರನ್ನು ನೇಮಿಸುವ ಕುರಿತು.

ಉಲ್ಲೇಖ: 1)ಈ ಕಛೇರಿ ಸುತ್ತೋಲೆ ಸಂಖ್ಯೆ:ಬಿಟಿಇ/05/ಇಸಿಎಸ್(1)/2024 ದಿ:17.05.2024
2)ಈ ಕಛೇರಿ ಸುತ್ತೋಲೆಸಂಖ್ಯೆ:ಬಿಟಿಇ/05/ಇಸಿಎಸ್(1)/2024 ದಿ:18.06.2024
3)ಈ ಕಛೇರಿ ಜ್ಞಾಪನ ಸಂಖ್ಯೆ:ಬಿಟಿಇ/ 01/ಇಎಪಿ/2024 ದಿ:20.06.2024
4)ತಾಂತ್ರಿಕ ಪರೀಕ್ಷಾ ಮಂಡಳಿಯ ದಿ:04.02.2013 ರಂದು ನಡೆದ 153ನೇ ಕೇಂದ್ರೀಯ ಸಭೆಯ ನಿರ್ಣಯ 153.2.11
5) ಸರ್ಕಾರಿ ಆದೇಶ ಸಂಖ್ಯೆ:ಇಡಿ 57 ಟಿಪಿಇ 2013 ದಿನಾಂಕ:17.4.2015

* * * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಜೂನ್/ಜುಲೈ 2024 Makeup ಪರೀಕ್ಷೆಗೆ ಸಂಬಂಧಿಸಿದಂತೆ ಆಂತರಿಕ ಅಂಕಗಳನ್ನು ಹಾಗೂ ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಮತ್ತು Makeup ಪರೀಕ್ಷಾ ಶುಲ್ಕ ಪಾವತಿ ವಿವರಗಳನ್ನು ಪರಿಶೀಲಿಸಲು ತಾಂತ್ರಿಕ ಪರೀಕ್ಷಾ ಮಂಡಳಿಯಿಂದ ಮೇ 2024 ರ ಡಿಪ್ಲೋಮ ಸೆಮಿಸ್ಟರ್ ಪರೀಕ್ಷೆ ವೇಳೆ ವಿವಿಧ ಪಾಲಿಟೆಕ್ನಿಕ್ ಸಂಸ್ಥೆಗಳಿಗೆ ಆಂತರಿಕ ಅಂಕಗಳ ಪರಿವೀಕ್ಷಕರಾಗಿ ನಿಯೋಜನೆಗೊಂಡಿದ್ದಂತಹ ಆಂತರಿಕ ಅಂಕಗಳ ಪರೀಕ್ಷಕರುಗಳನ್ನು ಮತ್ತೊಮ್ಮೆ ನೇಮಿಸಲಾಗಿದೆ.

ಜುಲೈ 2024 Makeup ಪರೀಕ್ಷೆಯ ನೋಡಲ್ ಪರೀಕ್ಷಾ ಕೇಂದ್ರ ಮತ್ತು ಅದಕ್ಕೆ ಜೋಡಣೆಯಾಗುವ ಪಾಲಿಟೆಕ್ನಿಕ್ ಸಂಸ್ಥೆಗಳ ವಿದ್ಯಾರ್ಥಿಗಳ Makeup ಆಂತರಿಕ ಅಂಕಗಳ ವಹಿ, ವಿದ್ಯಾರ್ಥಿಗಳಿಗೆ ಸಂಬಂಧಪಟ್ಟ ಪ್ರತಿ ವಿಷಯದ ಬ್ಲ್ಯೂ ಬುಕ್ ಗಳು, ಆಂತರಿಕ ಅಂಕಗಳ ರಿಜಿಸ್ಟರ್ ಮತ್ತು ಚೆಕ್ ಲಿಸ್ಟ್‌ನಲ್ಲಿ ತಿಳಿಸಿರುವಂತೆ ಸಂಬಂಧಪಟ್ಟ ಎಲ್ಲಾ ದಾಖಲಾತಿಗಳನ್ನು ಮೇ 2024 ರ ಡಿಪ್ಲೋಮ ಸೆಮಿಸ್ಟರ್ ಪರೀಕ್ಷೆಯ ಆಂತರಿಕ ಅಂಕಗಳ ಪರಿಶೀಲನೆಗೆ ನಿಯೋಜಿಸಲ್ಪಟ್ಟ ಪರಿವೀಕ್ಷಕರೇ ಪರಿಶೀಲಿಸುವರು.

ಆಂತರಿಕ ಅಂಕಗಳ ಪರಿವೀಕ್ಷಕರ ನೇಮಕಾತಿ ಮಾಹಿತಿ BTELinx ವೆಬ್ ಪೋರ್ಟಲ್‌ನಲ್ಲಿ (ನೋಡಲ್ ಸರ್ಕಾರಿ ಸಂಸ್ಥೆಗಳಿಗೂ ಸಹಿತ) ಲಭ್ಯವಿರುತ್ತದೆ. ಆದಾಗ್ಯೂ ಮೇ 2024 ರ ಡಿಪ್ಲೋಮ ಸೆಮಿಸ್ಟರ್ ಪರೀಕ್ಷೆಗಳಲ್ಲಿ ತಮ್ಮ ಸಂಸ್ಥೆಗೆ ನಿಯೋಜನೆಗೊಂಡಿದ್ದ ಆಂತರಿಕ ಅಂಕಗಳ ಪರಿವೀಕ್ಷಕರನ್ನು ದೂರವಾಣಿ ಮುಖಾಂತರ ಸಂಪರ್ಕಿಸಿ, ನಿಮ್ಮ ಸಂಸ್ಥೆಯ ವಿದ್ಯಾರ್ಥಿಗಳಿಗೆ ಸಂಬಂಧಪಟ್ಟ ಪ್ರತಿ ವಿಷಯದ ಬ್ಲ್ಯೂ ಬುಕ್ (Blue Book) ಗಳು, ಆಂತರಿಕ ಅಂಕಗಳ ರಿಜಿಸ್ಟರ್ ಮತ್ತು ಚೆಕ್ ಲಿಸ್ಟ್‌ನಲ್ಲಿ ತಿಳಿಸಿರುವಂತೆ ಸಂಬಂಧಪಟ್ಟ ಎಲ್ಲಾ ದಾಖಲಾತಿಗಳನ್ನು ಸಂಬಂಧಪಟ್ಟ ನಮೂನೆಗಳಲ್ಲಿ ಆಂತರಿಕ ಅಂಕಗಳ ಪರಿವೀಕ್ಷಕರಿಗೆ ಒದಗಿಸುವುದು ಮತ್ತು ಆಂತರಿಕ ಅಂಕಗಳನ್ನು ಕಡ್ಡಾಯವಾಗಿ ವಿದ್ಯಾರ್ಥಿಗಳ ಪ್ರವೇಶ ಪತ್ರಗಳನ್ನು ಡೌನ್‌ಲೋಡ್ ಮಾಡುವ ಮೊದಲು ಆನ್‌ಲೈನ್‌ನಲ್ಲಿ BTELinx ವೆಬ್ ಪೋರ್ಟಲ್ ಮೂಲಕ ಪರಿವೀಕ್ಷಕರ ಸಮ್ಮುಖದಲ್ಲಿ ಅಪ್‌ಲೋಡ್ ಮಾಡಲು ಸೂಚಿಸಲಾಗಿದೆ.

ಆನ್ ಲೈನ್‌ನಲ್ಲಿ (ಶೇ.40 & ಹೆಚ್ಚಿನ ಅಂಕ ಗಳಿಸಿದ ವಿದ್ಯಾರ್ಥಿಗಳ) ಆಂತರಿಕ ಅಂಕಗಳನ್ನು ಪ್ರತಿ ಕೋರ್ಸಿನ ಡಿಕ್ಷನರಿಯಂತೆ ಯಶಸ್ವಿಯಾಗಿ ಅಪ್ ಲೋಡ್ ಮಾಡಿದ ತಕ್ಷಣ BTELinx ವೆಬ್‌ಪೋರ್ಟಲ್‌ನಿಂದ ಒಂದು ಪ್ರಿಂಟ್ ತೆಗೆದು ಆಂತರಿಕ ಅಂಕಗಳ ರಿಜಿಸ್ಟರ್‌ನೊಡನೆ ಮತ್ತೊಮ್ಮೆ ತಾಳೆ ಮಾಡಿ ಪರಿವೀಕ್ಷಕರು ಹಾಗೂ ಪ್ರಾಚಾರ್ಯರು ಪ್ರತಿ ಪುಟದಲ್ಲಿ ಸಹಿ ಮಾಡಿ ವಿದ್ಯಾರ್ಥಿಗಳ ಸೂಚನಾ ಫಲಕದಲ್ಲಿ ಕಡ್ಡಾಯವಾಗಿ ಪ್ರಕಟಿಸುವುದು ಮತ್ತು ಅದರ ಪ್ರತಿ ಹಾಗೂ ಚೆಕ್‌ಲಿಸ್ಟ್ ನಮೂನೆಗಳನ್ನು ಮಂಡಳಿಗೆ ಕಳುಹಿಸಿಕೊಡತಕ್ಕದ್ದು. ಆಂತರಿಕ ಅಂಕಗಳ ಪರಿವೀಕ್ಷಕರು ಚೆಕ್ ಲಿಸ್ಟ್‌ನ ಒಂದು ದೃಢೀಕೃತ ಪ್ರತಿಯನ್ನು ತಮ್ಮಲ್ಲಿ ಇಟ್ಟುಕೊಳ್ಳುವುದು.

ಆಂತರಿಕ ಅಂಕಗಳ ವಹಿಯಲ್ಲಿ ಪರಿವೀಕ್ಷಕರು ಪರಿಶೀಲನೆ ವೇಳೆ ಯಾವುದಾದರೂ ಅಂಕಗಳನ್ನು ತಿದ್ದುಪಡಿ ಮಾಡಿದಲ್ಲಿ, ಅವುಗಳನ್ನು ಕಿರುಸಹಿಯಿಂದ ದೃಢೀಕರಿಸುವುದು ಹಾಗೂ ಪ್ರತಿ ಪುಟಗಳಲ್ಲಿಯೂ ತಿದ್ದುಪಡಿಗಳ ಸಂಖ್ಯೆಯನ್ನು ನಮೂದಿಸಿ ದೃಢೀಕರಿಸುವುದು ಕಡ್ಡಾಯ ಎಂದು ತಿಳಿಸಲಾಗಿದೆ. ಮತ್ತು ಉಪನ್ಯಾಸಕರು/ವಿಭಾಗಾಧಿಕಾರಿ/ಪ್ರಾಂಶುಪಾಲರು ದೃಢೀಕರಿಸಿರುವುದನ್ನು ಖಾತರಿಪಡಿಸಿಕೊಂಡು ಪರಿವೀಕ್ಷಕರು ಎಲ್ಲಾ ಪುಟಗಳಲ್ಲಿಯೂ ಪೂರ್ಣ ಸಹಿ ಮಾಡತಕ್ಕದ್ದು ಹಾಗೂ ಕೊನೆಯ ಪುಟದಲ್ಲಿ ಪ್ರಿನ್ಸಿಪಾಲರು ಮತ್ತು ಆಂತರಿಕ ಅಂಕಗಳ

Scanned with CamScanner

ಪರಿವೀಕ್ಷಕರುಗಳು ಕೆಳಕಂಡಂತೆ ದೃಢೀಕರಿಸಲು ಸೂಚಿಸಲಾಗಿದೆ. ಈ ವಿಷಯದಲ್ಲಿ ಸಂಸ್ಥೆಗಳ ಪ್ರಾಂಶುಪಾಲರು ವೈಯಕ್ತಿಕ ಗಮನ ಹರಿಸುವುದು.

> <u>ದೃಢೀಕರಣ:</u> "ಆಂತರಿಕ ಅಂಕಗಳನ್ನು ಬ್ಲ್ಯೂಬುಕ್‌ಗಳೊಂದಿಗೆ ತಾಳೆಮಾಡಿ ಪರಿಶೀಲಿಸಲಾಗಿದೆ. ಸೆಮಿಸ್ಟರ್‌ವಾರು Makeup ಆಂತರಿಕ ವಹಿಯ ಕೊನೆ ಪುಟದಲ್ಲಿ ವಿಷಯವಾರು ಶೇ. 40ಕ್ಕಿಂತ ಕಡಿಮೆ ಅಂಕಗಳನ್ನು ಪಡೆದ ವಿದ್ಯಾರ್ಥಿಗಳ ವಿವರಗಳ ಪಟ್ಟಿಯನ್ನು ನಮೂದಿಸಲಾಗಿದೆ. ಆಂತರಿಕ ಅಂಕಗಳ ವಹಿಯ ಪ್ರತಿ ಪುಟದಲ್ಲಿಯೂ ಸಂಬಂಧಪಟ್ಟ ಉಪನ್ಯಾಸಕರು, ವಿಭಾಗಾಧಿಕಾರಿಗಳು ಮತ್ತು ಪ್ರಿನ್ಸಿಪಾಲರು ಸಹಿ ಮಾಡಿ ದೃಢೀಕರಿಸಿರುತ್ತಾರೆ. (   ) ಸಂಖ್ಯೆ ಆಂತರಿಕ ಅಂಕಗಳ ತಿದ್ದುಪಡಿಗಳನ್ನು ಕಿರುಸಹಿಯಿಂದ ದೃಢೀಕರಿಸಲಾಗಿದೆ."
>
> ಪ್ರಿನ್ಸಿಪಾಲರ ಸಹಿ
>
> ಪರಿವೀಕ್ಷಕರ ಸಹಿ ಮತ್ತು ವಿಳಾಸ

ಮುಂದುವರೆದು ಉಲ್ಲೇಖ(4) ರ ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿಯ ನಿರ್ಣಯದಂತೆ, ವಿದ್ಯಾರ್ಥಿಗಳಿಗೆ ಕಿರುಪರೀಕ್ಷೆ ನಡೆಸಿದ Blue Book ಗಳನ್ನು ಮೂರು ವರ್ಷ ಕಾಲಾವಧಿಯವರೆಗೆ ಸಂಗ್ರಹಿಸಿಟ್ಟು ನಂತರ ನಿಯಮಾನುಸಾರ ವಿಲೇ ಮಾಡತಕ್ಕದ್ದು ಮತ್ತು ಆಂತರಿಕ ಅಂಕಗಳ ವಹಿಯನ್ನು (I.A Marks Register) ಖಾಯಂ ದಾಖಲೆಯಾಗಿ ಸಂಗ್ರಹಿಸಿಡತಕ್ಕದ್ದೆಂದು ತಿಳಿಸಲಾಗಿದೆ.

Makeup CIE ಆಂತರಿಕ ಅಂಕಗಳನ್ನು ನಿಗಧಿತ ಸಮಯದಲ್ಲಿ ಪರಿವೀಕ್ಷಕರ ಸಮ್ಮುಖದಲ್ಲಿ ಆನ್ ಲೈನ್ (BTELinx) ಮೂಲಕ ಅಪ್‌ಲೋಡ್ ಮಾಡದೆ, ಪ್ರವೇಶ ಪತ್ರಗಳನ್ನು ಡೌನ್‌ಲೋಡ್ ಮಾಡಿ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಪರೀಕ್ಷೆಗಳು ಪ್ರಾರಂಭವಾಗುವ ಮೊದಲು ವಿತರಿಸುವಲ್ಲಿ ವಿಳಂಬವಾದರೆ ಸಂಬಂಧಿಸಿದ ಪ್ರಿನ್ಸಿಪಾಲರನ್ನೇ ನೇರ ಹೊಣೆಗಾರರನ್ನಾಗಿಸಿ ಉಲ್ಲೇಖ(5) ರ ಸರ್ಕಾರಿ ಆದೇಶದ ಪ್ರಕಾರ ಕ್ರಮ ಕೈಗೊಳ್ಳಲಾಗುವುದು.

**ವಿಶೇಷ ಸೂಚನೆ:**

1. ಆಂತರಿಕ ಪರೀಕ್ಷೆಗಳಲ್ಲಿ ಶೇಕಡ 40 ಕ್ಕಿಂತ ಕಡಿಮೆ ಅಂಕಗಳನ್ನು ಪಡೆದಿರುವ ಎಲ್ಲಾ ವಿದ್ಯಾರ್ಥಿಗಳ ಬ್ಲ್ಯೂಬುಕ್‌ಗಳನ್ನು ಕಡ್ಡಾಯವಾಗಿ ಪರಿಶೀಲಿಸಿ, ಸದರಿ ವಿದ್ಯಾರ್ಥಿಗಳು ಪಡೆದಿರುವ ಅಂಕಗಳನ್ನು ಆಂತರಿಕ ಅಂಕಗಳ ವಹಿಯಲ್ಲಿ ಸರಿಯಾಗಿ ನಮೂದಿಸಿರುವುದನ್ನು ಖಾತ್ರಿ ಪಡಿಸಿಕೊಳ್ಳಲು ಆಂತರಿಕ ಅಂಕಗಳ ಪರವೀಕ್ಷಕರುಗಳಿಗೆ ಸೂಚಿಸಲಾಗಿದೆ. ಮುಂದುವರೆದು, ಆಂತರಿಕ ಅಂಕಗಳ ಪರಿವೀಕ್ಷರುಗಳು, ಆಂತರಿಕ ಅಂಕಗಳ ವಹಿಯಲ್ಲಿ "ಆಂತರಿಕ ಪರೀಕ್ಷೆಗಳಲ್ಲಿ ಶೇಕಡ 40 ಕ್ಕಿಂತ ಕಡಿಮೆ ಅಂಕಗಳನ್ನು ಪಡೆದಿರುವ ಎಲ್ಲಾ ವಿದ್ಯಾರ್ಥಿಗಳ ಬ್ಲ್ಯೂಬುಕ್‌ಗಳನ್ನು ಕಡ್ಡಾಯವಾಗಿ ಪರಿಶೀಲಿಸಲಾಗಿದೆ ಹಾಗೂ ವಿದ್ಯಾರ್ಥಿಗಳು ಪಡೆದಿರುವ ಅಂಕಗಳನ್ನು ಆಂತರಿಕ ಅಂಕಗಳ ವಹಿಯಲ್ಲಿ ಸರಿಯಾಗಿ ನಮೂದಿಸಲಾಗಿದೆ" ಎಂದು ದೃಢೀಕರಿಸಿ ಸಹಿ ಮಾಡುವುದು ಕಡ್ಡಾಯವಾಗಿರುತ್ತದೆ. ತಪ್ಪಿದ್ದಲ್ಲಿ ಸಂಬಂಧಿಸಿದ ಆಂತರಿಕ ಅಂಕಗಳ ಪರವೀಕ್ಷಕರನ್ನೇ ನೇರ ಹೊಣೆಗಾರರನ್ನಾಗಿಸಿ ಸರ್ಕಾರಿ ಆದೇಶದ ಪ್ರಕಾರ ಸೂಕ್ತ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಲಾಗಿದೆ.
2. ಆಂತರಿಕ ಅಂಕಗಳನ್ನು ಕಡ್ಡಾಯವಾಗಿ **BTELinx** ವೆಬ್ ಪೋರ್ಟಲ್ ಮೂಲಕ ಅಪ್‌ಲೋಡ್ ಮಾಡಿದ ನಂತರ ಪ್ರವೇಶ ಪತ್ರಗಳನ್ನು ಮುದ್ರಿಸುವುದು.

ಕಾರ್ಯದರ್ಶಿ

ಇವರಿಗೆ,

1..ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪ್ರಾಂಶುಪಾಲರುಗಳಿಗೆ.-ಅಗತ್ಯ ಕ್ರಮಕ್ಕಾಗಿ
2.ಆಂತರಿಕ ಅಂಕಗಳ ಪರಿವೀಕ್ಷಕರುಗಳಿಗೆ- ಸಂಬಂಧಪಟ್ಟ ಪ್ರಿನ್ಸಿಪಾಲರುಗಳ ಮುಖಾಂತರ

ಪ್ರತಿ:

1. ಕಂಪ್ಯೂಟರ್ ವಿಭಾಗ – ಬಿಟಿಇ ಲಿಂಕ್ಸ್ ವೆಬ್‌ಪೋರ್ಟಲ್‌ನಲ್ಲಿ ಪ್ರಕಟಿಸಲು
2. ಇ-ಗವರ್ನೆನ್ಸ್ ವಿಭಾಗ –ವೆಬ್‌ಸೈಟ್‌ನಲ್ಲಿ ಪ್ರಕಟಿಸಲು
3. ಕಾರ್ಯದರ್ಶಿಯವರ ಆಪ್ತಶಾಖೆ
4. ಪರೀಕ್ಷಾ ವಿಭಾಗದ ಅಧಿಕಾರಿಗಳು/ ಸಿಬ್ಬಂದಿಯವರಿಗೆ
5. ಇಎಪಿ ವಿಭಾಗ

Scanned with CamScanner

"June/July 2024 Makeup IA"

**ಚೆಕ್‌ಲಿಸ್ಟ್ ನಮೂನೆ**

**(ಭರ್ತಿ ಮಾಡಿದ ನಂತರ ಕಾರ್ಯದರ್ಶಿಯವರಿಗೆ ರವಾನಿಸುವುದು)**

ತಾಂತ್ರಿಕ ಪರೀಕ್ಷಾ ಮಂಡಳಿಯಿಂದ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳಲ್ಲಿನ ಜೂನ್/ಜುಲೈ 2024 Makeup ಕಿರುಪರೀಕ್ಷೆಗಳಿಗೆ (CIE) ಹಾಜರಾದ ವಿದ್ಯಾರ್ಥಿಗಳ ಆಂತರಿಕ ಅಂಕಗಳನ್ನು (IA Marks) ಪರಿಶೀಲಿಸಲು ಮತ್ತು June/July 2024 Makeup Exam (SEE) ಪರೀಕ್ಷಾ ಶುಲ್ಕ ಪಾವತಿ ವಿವರಗಳನ್ನು ಪರಿಶೀಲಿಸಲು ನಿಯೋಜಿಸಲ್ಪಟ್ಟ ಅಧಿಕಾರಿಗಳು ಗಮನಿಸಬೇಕಾದ ಅಂಶಗಳು(ಚೆಕ್‌ಲಿಸ್ಟ್)

| ಕ್ರ.ಸಂ. | ಅವಲೋಕನ/ವಿವರ | ಹೌದು | ಇಲ್ಲ |
|---|---|---|---|
| 1 | 2020-21, 2021-22, 2022-23 ಹಾಗೂ 2023-24ನೇ ಶೈಕ್ಷಣಿಕ ಸಾಲುಗಳಲ್ಲಿ C-20 ಪಠ್ಯಕ್ರಮದಲ್ಲಿ ವ್ಯಾಸಂಗ ಮಾಡಿರುವ ಶೇ.40ಕ್ಕಿಂತ ಕಡಿಮೆ ಆಂತರಿಕ ಅಂಕಗಳನ್ನು (CIE) ಪಡೆದು ಅಂತಿಮ ಪರೀಕ್ಷೆ ತೆಗೆದುಕೊಳ್ಳುವ ಅರ್ಹತೆ ಕಳೆದುಕೊಂಡ ವಿದ್ಯಾರ್ಥಿಗಳಿಗೆ ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ ಈ ಕಛೇರಿ ಸುತ್ತೋಲೆಗಳ ಸಂಖ್ಯೆ: ಬಿಟಿಇ 05 ಇಸಿಎಸ್(1) 2024 ದಿನಾಂಕ:17.05.2024 & 18.06.2023 ರ ಪ್ರಕಾರ CIE ಅಂಕಗಳನ್ನು Improve ಗೊಳಿಸುವ ಸಂಬಂಧ ದಿನಾಂಕ:03.06.2024 ರಿಂದ 20.06.2024 ರವರೆಗೆ ನಿಗದಿಪಡಿಸಿದ ಅವಧಿಯಲ್ಲಿ Makeup ತರಗತಿಗಳನ್ನು ನಡೆಸಲಾಗಿದೆಯೇ? | ☐ | ☐ |
| 2 | ಹಾಗೂ ದಿನಾಂಕ:24.06.2024 ರಿಂದ 28.06.2024 ರವರೆಗಿನ ಅವಧಿಯಲ್ಲಿ Makeup CIE ಕಿರುಪರೀಕ್ಷೆಗಳನ್ನು ನಡೆಸಲಾಗಿದೆಯೇ? | ☐ | ☐ |
| 3 | Makeup ತರಗತಿಗಳನ್ನು ನಡೆಸಿದ ಬಗ್ಗೆ ವಿದ್ಯಾರ್ಥಿಗಳ ಹಾಜರಾತಿ ಪುಸ್ತಕ ಪ್ರತಿ ವಿಭಾಗದಲ್ಲಿ ಇರುವುದೇ? | ☐ | ☐ |
| 4 | C-20 ಪಠ್ಯಕ್ರಮಗಳಲ್ಲಿ ಆಂತರಿಕ ಅಂಕಗಳನ್ನು ನೀಡಲು ವಿದ್ಯಾರ್ಥಿ ಚಟುವಟಿಕೆ (Student activity-MCQ/Quiz/ Open Book Test/ Assignments) ಗಳನ್ನು ನಡೆಸಲಾಗಿದೆಯೇ? | ☐ | ☐ |
| 5 | C-20 ಪಠ್ಯಕ್ರಮಗಳಲ್ಲಿನ ಪ್ರಾಯೋಗಿಕ ವಿಷಯಗಳಲ್ಲಿ ಆಂತರಿಕ ಅಂಕಗಳನ್ನು ನೀಡಲು ಕೌಶಲ್ಯ ಕಿರುಪರೀಕ್ಷೆಗಳನ್ನು (Skill Tests) ನಡೆಸಲಾಗಿದೆಯೇ? | ☐ | ☐ |
| 6 | C-20 ಪಠ್ಯಕ್ರಮಗಳಲ್ಲಿನ ಥಿಯರಿ/ ಪ್ರಾಯೋಗಿಕ ವಿಷಯಗಳಲ್ಲಿ ಆಂತರಿಕ ಅಂಕಗಳನ್ನು (CIE) ನಿಗದಿಪಡಿಸುವಾಗ (ಲ್ಯಾಟರಲ್ ಎಂಟ್ರಿ ವಿದ್ಯಾರ್ಥಿಗಳ Bridge Subjects ಸಹಿತ) ಸರ್ಕಾರಿ ಆದೇಶ/ ಚಾಲ್ತಿಯಲ್ಲಿರುವ ಸುತ್ತೋಲೆಗಳನುಸಾರ ಮೌಲ್ಯಮಾಪನವನ್ನು Rubrics for Skill Test/Practical Test/ Course Assessment & Evaluation Chart/appropriate Rubrics by respective Course Co-ordinatorsಗಳನುಸಾರ ಮೌಲ್ಯಮಾಪನ ಮಾಡಲಾಗಿದೆಯೇ? | ☐ | ☐ |
| 7 | C-20 ಪಠ್ಯಕ್ರಮದ ಪಠ್ಯವಿಷಯಗಳಲ್ಲಿ ಪ್ರತಿ ಕಿರುಪರೀಕ್ಷೆ/ ಚಟುವಟಿಕೆಗಳು/ಕೌಶಲ್ಯ ಕಿರು ಪರೀಕ್ಷೆಗಳನ್ನು ನಡೆಸಿದ ತರುವಾಯ ನಿಗದಿಪಡಿಸಲಾದ CO's attainments ಸಾಧಿಸಲಾಗಿದೆಯೇ? | ☐ | ☐ |
| 8 | ವಿದ್ಯಾರ್ಥಿಗಳು Makeup CIE ಕಿರುಪರೀಕ್ಷೆ ಬರೆಯಲು ಬ್ಲ್ಯೂ ಬುಕ್ ಇಟ್ಟಿರುವರೇ? | ☐ | ☐ |
| 9 | C-20 ಪಠ್ಯಕ್ರಮದ ವಿಷಯಗಳಿಗೆ ಆಂತರಿಕ ಅಂಕಗಳಿಗಾಗಿ (ಥಿಯರಿ ಮತ್ತು ಪ್ರಾಯೋಗಿಕ) ವಿದ್ಯಾರ್ಥಿ ಚಟುವಟಿಕೆಗಳನ್ನು (Student activity) ನಡೆಸುವಾಗ Performance indicator (Rubrics) ಗಳನುಸಾರ ಮೌಲ್ಯಮಾಪನ ಮಾಡಲಾಗಿದೆಯೇ? ಅದಕ್ಕೆ evidence ಒದಗಿಸಲಾಗಿದೆಯೇ? | ☐ | ☐ |
| 10 | ವಿದ್ಯಾರ್ಥಿಗಳ ಪ್ರಾಯೋಗಿಕ ವಿಷಯಗಳ ರೆಕಾರ್ಡ್‌ಗಳ/ಇತರೆ ಶೈಕ್ಷಣಿಕ ದಾಖಲೆಗಳ ಮೌಲ್ಯಮಾಪನವಾಗಿದೆಯೇ? | ☐ | ☐ |
| 11 | ಚಾಲ್ತಿಯಲ್ಲಿರುವ ನಿಯಮಗಳನುಸಾರ (ಸರ್ಕಾರಿ ಆದೇಶಗಳಂತೆ) ಅವುಗಳ ಮೌಲ್ಯಮಾಪನವಾಗಿದೆಯೇ? | ☐ | ☐ |
| 12 | 2020-21, 2021-22, 2022-23 ಹಾಗೂ 2023-24ನೇ ಶೈಕ್ಷಣಿಕ ಸಾಲುಗಳಲ್ಲಿ ವ್ಯಾಸಂಗ ಮಾಡಿರುವ ಶೇಕಡಾ 40ಕ್ಕಿಂತ ಕಡಿಮೆ ಆಂತರಿಕ ಅಂಕಗಳನ್ನು(CIE) ಪಡೆದು ಅಂತಿಮ ಪರೀಕ್ಷೆ ತೆಗೆದುಕೊಳ್ಳಲು ಅರ್ಹತೆ ಕಳೆದುಕೊಂಡ ವಿದ್ಯಾರ್ಥಿಗಳಿಗೆ ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ ಈ ಕಛೇರಿ ಸುತ್ತೋಲೆಗಳ ಸಂಖ್ಯೆ ಬಿಟಿಇ 05 ಇಸಿಎಸ್(1)/2024 ದಿನಾಂಕ:17.05.2024 & 18.06.2023 ರ ಪ್ರಕಾರ CIE ಅಂಕಗಳನ್ನು Improve ಗೊಳಿಸುವ Make Up CIE ಕಿರುಪರೀಕ್ಷೆಗಳನ್ನು ವೇಳಾಪಟ್ಟಿಯಂತೆ ನಡೆಸಿ ಅಂತಹ ವಿದ್ಯಾರ್ಥಿಗಳ ಆಂತರಿಕ ಅಂಕಗಳನ್ನು ಸಂಬಂಧಪಟ್ಟ ಕ್ರೋಢೀಕೃತ ವಹಿಗಳಲ್ಲಿ (Consolidated IA Register) ಭರ್ತಿ ಮಾಡಿ ಎಲ್ಲಾ ಪುಟಗಳಲ್ಲಿ ಸಂಬಂಧಪಟ್ಟ ಉಪನ್ಯಾಸಕರುಗಳು, ವಿಭಾಗಾಧಿಕಾರಿಗಳು ಮತ್ತು ಪ್ರಾಂಶುಪಾಲರು ಸಹಿ ಮಾಡಿರುವರೇ? | ☐ | ☐ |

Scanned with CamScanner

| | | | |
|---|---|---|---|
| 13 | Makeup CIE ಕಿರುಪರೀಕ್ಷೆಗಳನ್ನು ನಡೆಸಿದ ನಂತರವೂ ಯಾವುದೇ ವಿಷಯದಲ್ಲಿ ಶೇ.40ಕ್ಕಿಂತ ಕಡಿಮೆ ಆಂತರಿಕ ಅಂಕಗಳನ್ನು (CIE) ಪಡೆದ ವಿದ್ಯಾರ್ಥಿಗಳ ಪಟ್ಟಿಯನ್ನು ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದೆಯೇ? ಹಾಗೂ ಅಂತಹ ವಿದ್ಯಾರ್ಥಿಗಳು ಆ ವಿಷಯದಲ್ಲಿ ಜೂನ್/ಜುಲೈ 2024 ರ Makeup (SEE) ಪರೀಕ್ಷೆ ತೆಗೆದುಕೊಳ್ಳಲು ಅರ್ಹರಿರುವುದಿಲ್ಲ ಎಂದು ಘೋಷಿಸಲಾಗಿದೆಯೇ? ಮತ್ತು ಅಂತಹ ವಿದ್ಯಾರ್ಥಿಗಳು ಜೂನ್/ಜುಲೈ 2024 ರ Makeup ಪರೀಕ್ಷೆ (SEE) ಯನ್ನು ಬರೆಯದಿರುವ ಬಗ್ಗೆ ಖಾತರಿಪಡಿಸಲಾಗಿದೆಯೇ?<br>ಸೂಚನೆ: Those Candidates who have not obtained requisite minimum pass marks in CIE are not eligible to take up SEE in that course until they get requisite minimum pass marks in the CIE. They may re-register for the CIE in the Make-up examinations. | ☐ | ☐ |
| 14 | ಸಂಸ್ಥೆಯಲ್ಲಿ ವಿದ್ಯಾರ್ಥಿಗಳ Makeup CIE ಅಂತರಿಕ ಅಂಕಗಳ ರಿಜಿಸ್ಟರ್‌ಗಳಲ್ಲಿ ವಿದ್ಯಾರ್ಥಿಗಳ ಸಹಿ ಪಡೆಯಲಾಗಿದೆಯೇ? | ☐ | ☐ |
| 15 | ಎಲ್ಲಾ ಕೋರ್ಸುಗಳ ಆಂತರಿಕ ಅಂಕಗಳನ್ನು BTELinx ವೆಬ್‌ಪೋರ್ಟಲ್ ಮೂಲಕ ಆನ್ ಲೈನ್‌ನಲ್ಲಿ ಅಪ್‌ಲೋಡ್ ಮಾಡಲಾಗಿದೆಯೇ? | ☐ | ☐ |
| 16 | ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಿದ ತಕ್ಷಣ BTELinx ವೆಬ್ ಪೋರ್ಟಲ್‌ನಿಂದ ಒಂದು ಪ್ರಿಂಟ್ ತೆಗೆದು ಸಂಸ್ಥೆಯಲ್ಲಿ ಆಂತರಿಕ ಅಂಕಗಳ ವಹಿಯೊಡನೆ ತಾಳೆ ಮಾಡಿ ನಂತರ ಪರಿವೀಕ್ಷಕರು ಮತ್ತು ಪ್ರಾಚಾರ್ಯರು ಸಹಿ ಮಾಡಿ ವಿದ್ಯಾರ್ಥಿಗಳ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದೆಯೇ? | ☐ | ☐ |
| 17 | **ಪರಿವೀಕ್ಷಕರು C-20 ಪಠ್ಯಕ್ರಮದ ವಿದ್ಯಾರ್ಥಿಗಳ ಆಂತರಿಕ ಅಂಕಗಳ ರಿಜಿಸ್ಟರ್‌ಗಳಲ್ಲಿ June/July 2024 Makeup CIE ಗೆ ಸಂಬಂಧಪಟ್ಟ ಎಲ್ಲಾ ಪುಟಗಳಲ್ಲಿ ಪೂರ್ಣ ಸಹಿ ಮಾಡಿ ಕೊನೆಯ ಪುಟದಲ್ಲಿ ತಿಳಿಸಿರುವಂತೆ ಧೃಢೀಕರಿಸಿ ಪೂರ್ಣ ವಿಳಾಸ ನಮೂದಿಸಿರುವರೇ?** | ☐ | ☐ |
| 18 | ಜುಲೈ 2024 ರ Makeup ಪರೀಕ್ಷೆಗೆ ಪರೀಕ್ಷಾ ಶುಲ್ಕ ಪಾವತಿಸದೇ ಇರುವ ವಿದ್ಯಾರ್ಥಿಗಳ ಹೆಸರುಗಳನ್ನು ಆಯಾ ಕ್ಯಾಂಡಿಡೇಟ್ ಲಿಸ್ಟ್‌ನಿಂದ ತೆಗೆದು ಹಾಕಲಾಗಿದೆಯೇ? | ☐ | ☐ |
| 19 | 2020-21ನೇ ಶೈಕ್ಷಣಿಕ ಸಾಲಿನಿಂದ ಜಾರಿಯಲ್ಲಿರುವ C-20 ಪಠ್ಯಕ್ರಮದಲ್ಲಿ ಪ್ರವೇಶ ಪಡೆದು 1 ರಿಂದ 6ನೇ ಸೆಮಿಸ್ಟರ್‌ಗಳಲ್ಲಿ ಅನುತ್ತೀರ್ಣಗೊಂಡಿರುವ ಮತ್ತು Makeup ಕಿರುಪರೀಕ್ಷೆಗಳಲ್ಲಿ ಕನಿಷ್ಠ ಶೇ.40 ಆಂತರಿಕ ಅಂಕಗಳನ್ನು ಪಡೆದಿರುವ ಅರ್ಹ ವಿದ್ಯಾರ್ಥಿಗಳು ಪ್ರಾಯೋಗಿಕ ಹಾಗೂ ಥಿಯರಿ ವಿಷಯಗಳಲ್ಲಿ Makeup (SEE)- June/July 2024 ಪರೀಕ್ಷೆ ತೆಗೆದುಕೊಳ್ಳಲು ಈ ಕಛೇರಿ ಜ್ಞಾಪನ ಸಂಖ್ಯೆ: ಬಿಟಿಇ/01/ಇಎ/2024 ದಿನಾಂಕ: 20.06.2024 ರನ್ವಯ ಸರ್ಕಾರಿ ಖಜಾನೆಗೆ ಪಾವತಿಸಲಾಗಿರುವ ಒಟ್ಟು ಪರೀಕ್ಷಾ ಶುಲ್ಕದ ಮೊತ್ತವು ಸಂಸ್ಥೆಯಲ್ಲಿನ June/July 2024 Makeup ಪರೀಕ್ಷೆಯ ಕ್ಯಾಂಡಿಡೇಟ್ ಲಿಸ್ಟ್‌ನ ಲೆಡ್ಜರ್‌ನಲ್ಲಿ ನಮೂದಿಸಿರುವಂತೆ ವಿದ್ಯಾರ್ಥಿಗಳು ನಿಯಮಾನುಸಾರ ಪಾವತಿಸಬೇಕಾದ ಮೊತ್ತಕ್ಕೆ ತಾಳೆಯಾಗುತ್ತದೆಯೇ? (ಶುಲ್ಕ ಪಾವತಿ ವಿವರಗಳನ್ನು ಪರಿಶೀಲಿಸಿ ಪ್ರತಿ ಚಲನ್ ಮೇಲೆ ಕೆಂಪು ಶಾಯಿಯಿಂದ "PAID FOR JUNE/JULY 2024 MAKEUP EXAM & CANCELLED"ಎಂದು ನಮೂದಿಸುವುದು | ☐ | ☐ |
| 20 | ಪರಿವೀಕ್ಷಕರ ಷರಾ (ಏನಾದರೂ ಇದ್ದಲ್ಲಿ): | | |

<u>ಧೃಢೀಕರಣ:</u>

**ಸಂಸ್ಥೆಯಲ್ಲಿನ ಎಲ್ಲಾ ಪ್ರೋಗ್ರಾಂಗಳ ಎಲ್ಲಾ Makeup ವಿದ್ಯಾರ್ಥಿಗಳ ವಿವರಗಳನ್ನು ಬಿಟಿಇಲಿಂಕ್ಸ್ ನಲ್ಲಿರುವ ಪರೀಕ್ಷಾ ಅಭ್ಯರ್ಥಿಗಳ ಪಟ್ಟಿಯೊಂದಿಗೆ ಪರಿಶೀಲಿಸಲಾಗಿದ್ದು, ಸದರಿ ವಿದ್ಯಾರ್ಥಿಗಳು ನಿಗದಿತ ಪರೀಕ್ಷಾ ಶುಲ್ಕವನ್ನು ಪಾವತಿಸಿ, ಅರ್ಜಿ ಸಲ್ಲಿಸಿ, ನೋಂದಾಯಿಸಿರುತ್ತಾರೆ ಹಾಗೂ ಸದರಿ ಪ್ರೋಗ್ರಾಂಗಳ Lateral Entry/Change of Program ಪಡೆದಿರುವ ವಿದ್ಯಾರ್ಥಿಗಳು ನೋಂದಾಯಿಸಿರುವ ಬ್ರಿಡ್ಜ್ ವಿಷಯಗಳ ಸಹಿತ Subject Dictionary ಗಳನ್ನು ಪರಿಶೀಲಿಸಿ ವಿವರಗಳು ಸರಿಯಿರುವುದನ್ನು ಖಚಿತಪಡಿಸಿಕೊಳ್ಳಲಾಗಿದೆ. ಎಲ್ಲಾ ಅರ್ಹ ವಿದ್ಯಾರ್ಥಿಗಳ ಆಂತರಿಕ ಅಂಕಗಳನ್ನು ಸಂಬಂಧಪಟ್ಟ ವಿಭಾಗಾಧಿಕಾರಿಗಳು ಹಾಗೂ ಸಂಸ್ಥೆಯ ಪ್ರಾಂಶುಪಾಲರ ಸಮ್ಮುಖದಲ್ಲಿ ಬಿಟಿಇಲಿಂಕ್ಸ್ ವೆಬ್ ಪೋರ್ಟಲ್ ನಲ್ಲಿ ನಮೂದಿಸಲಾಗಿದೆ ಮತ್ತು ಸದರಿ ವಿವರಗಳನ್ನು ಬಿಟಿಇಲಿಂಕ್ಸ್ ವೆಬ್ ಪೋರ್ಟಲ್ ನಿಂದ ಡೌನ್ ಲೋಡ್ ಮಾಡಿ ಪರಿಶೀಲಿಸಲಾಗಿ, ಎಲ್ಲಾ ವಿವರಗಳು ಸರಿಯಾಗಿರುವುದು ಕಂಡುಬಂದಿದೆ ಎಂದು ಧೃಢೀಕರಿಸಲಾಗಿದೆ.**

ಪರಿವೀಕ್ಷಕರ ಸಹಿ & ಪೂರ್ಣ ವಿಳಾಸ (ಸೀಲು) ಪ್ರಾಂಶುಪಾಲರ ಸಹಿ

Scanned with CamScanner